ಸಂಖ್ಯೆ: ಬೆಂಜಮಂ/ಮುಆಅ-ಕಾ/೧೨/1772/೨೦೦೪-೦೫ ದಿನಾಂಕ: 3-9-04

## ಟೆಂಡರ್ ಪ್ರಕಟಣೆ

ವಿಷಯ: ಮಾರುತಿ/ಅಂಬಾಸಿಡರ್ ಕಾರುಗಳನ್ನು ಬಾಡಿಗೆ ಆಧಾರದ ಮೇಲೆ ಒದಗಿಸುವ ಬಗ್ಗೆ.

ಬೆಂಗೂಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿಕಾರಿಗಳ ದೈನಂದಿನ ಕೆಲಸಕಾರ್ಯಗಳ ಉಪಯೋಗಕ್ಕಾಗಿ ೧೯೯೭ ರ ಸಾಲಿನ ಅಥವಾ ನಂತರ ನೋಂದಾಯಿಸಲ್ಪಟ್ಟಿರುವ ಸುಸ್ಥಿತಿಯಲ್ಲಿರುವ ಕಾರುಗಳನ್ನು ಹೊಂದಿ ಆಸಕ್ತಿಯುಳ್ಳ ನೋಂದಾಯಿತ ಖಾಸಗಿ ಕಂಪನಿಗಳು ಹಾಗೂ ಸಂಸ್ಥೆಗಳಿಂದ ಮಾಹೆಯಾನ ಬಾಡಿಗೆ ಆಧಾರದ ಮೇಲೆ ಇಂಧನ ವೆಚ್ಚವನ್ನು ಚಾಲಕರುಗಳನ್ನೊಳಗೊಂಡಂತೆ ಮಾರುತಿ ವ್ಯಾನ್ ಅಥವಾ ಅಂಬಾಸಿಡರ್ ಕಾರುಗಳನ್ನು ಒಂದು ವರ್ಷದ ಅವಧಿಗಾಗಿ ನೀಡಲು ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ನಿಬಂಧನೆ ಮತ್ತು ನಮೂನೆಗಳನ್ನು ದಿನಾಂಕ ೧೫-೯-೨೦೦೪ ರಿಂದ ೧೬-೯-೨೦೦೪ ರವರೆಗೆ ರೂ ೫೦೦ + ತೆರಿಗೆ (ಹಿಂತಿರುಗಿಸ ಲಾಗುವುದಿಲ್ಲ) ಪಾವತಿಸಿ ಮಂಡಲಿಯ ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿಗಳು, ೧ನೇ ಅಂತಸ್ತು, ಕಾವೇರಿ ಭವನ, ಬೆಂಗಳೂರು-೫೬೦ ೦೦೯ ಇವರ ಕಛೇರಿಗೆ ಸಂಸ್ಥೆಯ ಅಧಿಕೃತ ಪತ್ರದಲ್ಲಿ ಮನವಿಯನ್ನು ಸಲ್ಲಿಸಿ ಪಡೆಯಬಹುದು. ಮೊಹರಾದ ಟೆಂಡರ್‌ಗಳನ್ನು ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ ಇವರ ಕಛೇರಿಯಲ್ಲಿ ಭದ್ರತಾ ಠೇವಣಿಯಾಗಿ ರೂ ೫೦,೦೦೦-೦೦ ದ ಡಿ.ಡಿ.ಯೊಂದಿಗೆ ದಿನಾಂಕ ೨೪-೯-೨೦೦೪ ರ ಮಧ್ಯಾಹ್ನ ೪.೦೦ ಗಂಟೆಯೊಳಗೆ ಸಲ್ಲಿಸತಕ್ಕದ್ದು.

ಹೆಚ್ಚಿನ ವಿವರಗಳು ಬೇಕಿದ್ದಲ್ಲಿ ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ ಇವರ ಕಛೇರಿಯನ್ನು ಸಂಪರ್ಕಿಸಿ ಪಡೆಯತಕ್ಕದ್ದು.